ಅಲ್ಲಿಯ ಪ್ರಾಥಮಿಕ ಶಾಲೆಯಲ್ಲಿ ಒಂದೇ ವರ್ಷದಲ್ಲಿ ಎರಡು ಇಯತ್ತೆಗಳಷ್ಟು ಮುಂದೆ ಜಿಗಿಯುವ ಸವಲತ್ತು ಪಡೆದಿದ್ದರು. 1952ರಲ್ಲಿ ರಘುನಾಥರು ಧಾರವಾಡಕ್ಕೆ ಬಂದು ನೆಲೆಸಿದರು. ಆಗ ಗಿರೀಶರು 10ನೇತ್ತ, 11ನೇತ್ತ ಬಾಸೆಲ್ ಮಿಶನ್ ಹೈಸ್ಕೂಲಿನಲ್ಲಿ ಕಲಿತರು. ಅದೇ ಸ್ಕೂಲಿನಲ್ಲಿ ನಾನು 8ನೇತ್ತಕ್ಕೆ ಬಂದಾಗ ಗಿರೀಶ 11ನೇತ್ತದಲ್ಲಿದ್ದರು. ಹೀಗಾಗಿ, ವಯಸ್ಸಿನಲ್ಲಿ ನನಗಿಂತ ಸ್ವಲ್ಪ ಮಾತ್ರ ದೊಡ್ಡವರಾಗಿದ್ದ ಗಿರೀಶ ಕ್ಲಾಸಿನಲ್ಲಿ 2 ವರ್ಷ ಮುಂದೆ ಇದ್ದರು. ಮಿಶನ್ ಹೈಸ್ಕೂಲ್ ಸೇರಿದ ವರ್ಷವೇ, ವಾರ್ಷಿಕೋತ್ಸವದಲ್ಲಿ ಭಿಕ್ಷುಕನ ಪಾತ್ರದಲ್ಲಿ ಅಭಿನಯಿಸಿ ಫ್ಯಾನ್ಸಿ ಡ್ರೆಸ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದದ್ದು ಕೇಳಿದ್ದೆ. ಮುಂದೆ ಎಸ್‌ಎಸ್‌ಸಿ ಪರೀಕ್ಷೆಯಲ್ಲಿ ಡಿಸ್ಟಿಂಕ್ಶನ್ ಪಡೆದರು.

ಕರ್ನಾಟಕ ಕಾಲೇಜಿನಲ್ಲಿ ಕಲಿತು ಇಂಟರ್ ಆರ್ಟ್ಸ್ ಪರೀಕ್ಷೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಪ್ರಥಮ ಸ್ಥಾನ ಪಡೆದಿದ್ದ ಗಿರೀಶ ಕಾರ್ನಾಡರನ್ನು ಮತ್ತು ಎಸ್‌ಎಸ್‌ಸಿಯಲ್ಲಿ ಕೇಂದ್ರಕ್ಕೆ ಪ್ರಥಮ ಸ್ಥಾನ ಪಡೆದಿದ್ದ, ಗರ್ಲ್ಸ್ ಹೈಸ್ಕೂಲಿನ ಮಸ್ಕರ್‌ನ್ಹೀಸ್‌ಳನ್ನು 11.07.1956ರಂದು ನಮ್ಮ ಸ್ಕೂಲಿನಲ್ಲಿ ಸನ್ಮಾನಿಸಿದಾಗ ನಾನು ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿದ್ದೆ. ಗುರುಗಳಾದ ವರದರಾಜ ಹುಯಿಲಗೋಳರ ಪ್ರೀತಿ ನನಗೂ ಗಿರೀಶರಿಗೂ ಸಮಾನವಾಗಿ ಲಭಿಸಿತ್ತು. ಸನ್ಮಾನಕ್ಕೆ ಉತ್ತರಿಸುತ್ತ ಆ ದಿನ ಗಿರೀಶ ಸರಳವಾಗಿ ಕನ್ನಡದಲ್ಲಿ ಮಾತಾಡಿದ್ದು, ಇಂಗ್ಲಿಷಿನಲ್ಲಿ ಮಾತಾಡಿದ ಉಳಿದ ಶಿಕ್ಷಕರಿಗೂ ಪಾಠವಾಗಿತ್ತು.

ನಾನು ಕರ್ನಾಟಕ ಕಾಲೇಜಿನಲ್ಲಿ ಎಫ್‌ವೈಗೆ ಬಂದಾಗ ಗಿರೀಶ ಫೈನಲ್ ಬಿ.ಎ.ದಲ್ಲಿದ್ದರು. ತಮಗೆ ಸಾಹಿತ್ಯ, ಇತಿಹಾಸ ಪ್ರಿಯವಾಗಿದ್ದರೂ, ಪರೀಕ್ಷೆಯಲ್ಲಿ ಉಚ್ಚ ಶ್ರೇಣಿಯನ್ನು ಪಡೆಯುವ ಉದ್ದೇಶದಿಂದ ಗಣಿತ, ಸಂಖ್ಯಾಶಾಸ್ತ್ರ ತೆಗೆದುಕೊಂಡಿದ್ದರು. ಡಾ. ರಘುನಾಥರ ವ್ಯಾವಹಾರಿಕ ಲೆಕ್ಕಾಚಾರದ ಸಲಹೆಯೇ ಇದಕ್ಕೆ ಕಾರಣವಾಗಿತ್ತು. ಆ ಹೊತ್ತಿಗಾಗಲೇ ಕಾಲೇಜಿನಲ್ಲಿ ಕನ್ನಡ, ಇಂಗ್ಲಿಷ್ ಭಾಷಣ ಸ್ಪರ್ಧೆಗಳಲ್ಲಿ ಪಾಲುಗೊಳ್ಳುವ, ಇಂಗ್ಲಿಷ್ ನಾಟಕಗಳಲ್ಲಿ ಅಭಿನಯಿಸುವ ಜೊತೆಗೆ, ಉಡಾಳತನ ಮಾಡುವವರ ಗ್ಯಾಂಗ್‌ನಲ್ಲಿಯೂ ಗಿರೀಶರ ಹೆಸರು ಕೇಳಿಬರುತ್ತಿತ್ತು. ಹಗಲೆಲ್ಲ ಅತ್ತಿತ್ತ ತಿರುಗಾಡುತ್ತ, ಒಮ್ಮೊಮ್ಮೆ ಕ್ಲಾಸ್ ತಪ್ಪಿಸುತ್ತ, ಗೆಳೆಯರ ಜೊತೆಗೆ ದಾಂಧಲೆ ಹಾಕುತ್ತ, ಹೆಮ್ಮಾಡಿ ಕ್ಯಾಂಟೀನ್‌ದಲ್ಲಿ ಕಾಲ ಕಳೆಯುತ್ತ, ಆಟ ಆಡುತ್ತ, ಅವರ ಸಮಯವನ್ನು ಆಪೋಷಿಸುತ್ತಿದ್ದ ಗಿರೀಶ, ತನ್ನ ಆಪ್ತ ಗೆಳೆಯರಿಗೆ ಸಹ ತಿಳಿಯದ ಹಾಗೆ, ಮನೆಯಲ್ಲಿ ರಾತ್ರಿಯಿಡೀ ಕುಳಿತು ಅಭ್ಯಾಸ ಮಾಡುತ್ತಿದ್ದರು. ಬಿ.ಎ. ಪರೀಕ್ಷೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಪ್ರಥಮ ಸ್ಥಾನ ಪಡೆದ ನಂತರ ನಡೆದ ಕಾಲೇಜಿನ ಸನ್ಮಾನ ಸಮಾರಂಭದಲ್ಲಿ ಈ ಗುಟ್ಟನ್ನು ಬಿಚ್ಚಿಟ್ಟಿದ್ದರು.

ಕರ್ನಾಟಕ ಕಾಲೇಜಿನ 'ದಕ್ಷಿಣಾ ಫೆಲೋಶಿಪ್' ಪಡೆದು, ಎಂ.ಎ. ಕಲಿಯಲು ಮುಂಬಯಿಗೆ ಹೋದದ್ದು, ಪ್ರತಿಷ್ಠಿತ ರ್‍ಹೋಡ್ಸ್ ಸ್ಕಾಲರ್ಶಿಪ್ ಪಡೆದು ಆಕ್ಸ್‌ಫರ್ಡ್‌ರ್ ಮ್ಯಾಗ್ಡಲೀನ್ ಕಾಲೇಜು ಸೇರಿದ್ದು, ಆಕ್ಸ್‌ಫರ್ಡ್ ಯೂನಿಯನ್ ಸೊಸೈಟಿಯ ಪ್ರೆಸಿಡೆಂಟ್ ಆಗಿದ್ದು, ಅಲ್ಲಿದ್ದಾಗಲೇ ಭಾರತದ ಓಯೂಪಿ ನೌಕರಿ ಸಿಕ್ಕಿದ್ದು ಇತ್ಯಾದಿ ನಂತರದ ದಾಖಲೆಗಳು.

***

ಗಿರೀಶ ಡಾ. ಸರಸ್ವತಿ ಗಣಪತಿ ಅವರನ್ನು ಮದುವೆಯಾಗಿದ್ದು ಮುಂಬಯಿಯಲ್ಲಿ, 1980ರಲ್ಲಿ; ಹದಿನಾರು ವರ್ಷಗಳಷ್ಟು ಸುದೀರ್ಘ ಕಾಲದ ಪ್ರಣಯಾನಂದ ಅನುಭವಿಸಿದ ನಂತರ. ಆ ಹೊತ್ತಿಗಾಗಲೇ, ತಮ್ಮ 90ನೇ ವಯಸ್ಸಿನಲ್ಲಿ ರಘುನಾಥರು ಧಾರವಾಡದಲ್ಲಿ ತೀರಿಕೊಂಡಿದ್ದರು (1978). ಕಚೇರಿಯ ಕೆಲಸ ಮತ್ತು ಹಿಂದೀ ಸಿನೆಮಾಗಳಲ್ಲಿ ದುಡಿದು ಹಣ ಗಳಿಸುವ ಉದ್ದೇಶದಿಂದ ಗಿರೀಶ ಮುಂಬಯಿಯಲ್ಲಿ ಮನೆ ಮಾಡಿದ್ದರು. ನಂತರ ಮದ್ರಾಸ, ತದನಂತರ ಶಾಶ್ವತವಾಗಿ ಬೆಂಗಳೂರು ನಿವಾಸಿಯಾದರು. ಆದರೆ, ಧಾರವಾಡದ ನಂಟನ್ನು ಕಳಚಿಕೊಳ್ಳಲಿಲ್ಲ. ಮಗಳು ಶಾಲ್ಮಲೀ ರಾಧಾ (1981), ಮಗ ರಘು ಅಮೇಯ ಸೋಮೇಶ (1983). ಧಾರವಾಡದ ಸಾರಸ್ವತಪುರದ ಮನೆಗೆ ತುಂಬ ಹತ್ತಿರ ಸೋಮೇಶ್ವರದ ಗುಡಿ ಇದೆ. ಅಲ್ಲಿಯ ಪ್ರಾಕೃತಿಕ ಸೌಂದರ್ಯದಿಂದ ಆಕರ್ಷಿತರಾಗಿದ್ದ ಗಿರೀಶ ಮೇಲಿಂದ ಮೇಲೆ ಅಲ್ಲಿಗೆ ಹೋಗುತ್ತಿದ್ದರು. ಸೋಮೇಶ್ವರ ಧಾರವಾಡದ ಕವಿಗಳನ್ನು,